1	2	3
4. -ಅದೇ-ರಸ್ತೆಯ 169.00 ರಿಂದ 170.00 ವರೆಗೆ -ಅದೇ-	3.00	15.68 ಟನ್
5. -ಅದೇ-ರಸ್ತೆಯ 168.00 ರಿಂದ 169.00 -ಅದೇ-	3.00	15.71 ಟನ್
6. -ಅದೇ-ರಸ್ತೆಯ 150.00 ರಿಂದ 151.00 -ಅದೇ-	3.00	14.55 ಟನ್
7. -ಅದೇ-ರಸ್ತೆಯ 157.00 ರಿಂದ 158.00 ರವರೆಗೆ -ಅದೇ-	4.00	17.92 ಟನ್
8. -ಅದೇ-ರಸ್ತೆಯ 148.50 ರಿಂದ 149.50 ರವರೆಗೆ -ಅದೇ-	4.00	17.63 ಟನ್
9. -ಅದೇ- ರಸ್ತೆಯ 153.00 ರಿಂದ 154.00 ರವರೆಗೆ -ಅದೇ-	4.00	17.86 ಟನ್
ಒಟ್ಟು	**30.00**	**144.82 ಟನ್**

ಬಾಲ ಕಾರ್ಮಿಕರ ಸಮೀಕ್ಷೆ ಕಾರ್ಯ

771 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ರಾಜ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಳ್ಳಾರಿ ಜಿಲ್ಲೆಯಲ್ಲಿರುವ ಬಾಲ ಕಾರ್ಮಿಕರ ಸಮೀಕ್ಷೆ ಕಾರ್ಯವನ್ನು ಸರ್ಕಾರದವರು ಕೈಗೊಂಡಿದ್ದಾರೆಯೇ?*

ಆ) *ಹಾಗಿದ್ದಲ್ಲಿ ಈ ಸಮೀಕ್ಷೆ ಕಾರ್ಯವನ್ನು ಯಾವಾಗ ಕೈಗೊಳ್ಳಲಾಯಿತು?*

ಇ) *ಎಷ್ಟು ಬಾಲ ಕಾರ್ಮಿಕರನ್ನು ಈ ಜಿಲ್ಲೆಯಲ್ಲಿ ಗುರುತಿಸಲಾಗಿದೆ?*

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ಹೌದು.

ಆ) ದಿ. 15.4.97 ರಿಂದ 15.5.97ರ ವರೆಗೆ ಕೈಗೊಳ್ಳಲಾಯಿತು.

ಇ)

ಅಪಾಯಕಾರಿ ಉದ್ದಿಮೆಗಳಲ್ಲಿ	3801
ಅಪಾಯಕಾರಿ ಅಲ್ಲದ ಉದ್ದಿಮೆಗಳಲ್ಲಿ	4396
ಒಟ್ಟು	**8197**

ಕೇಂದ್ರ ಸ್ವಾಮ್ಯದ ಎಂ.ಎಂ.ಟಿ.ಸಿ. ಯಿಂದ ರಸ್ತೆ ಅಭಿವೃದ್ಧಿ ಹಣ

772 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಳ್ಳಾರಿ ಜಿಲ್ಲೆಯಲ್ಲಿರುವ ಕೇಂದ್ರ ಸ್ವಾಮ್ಯದ ಎಂ.ಎಂ.ಟಿ.ಸಿ.ಯಿಂದ ರಾಜ್ಯದ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?*

ಅ) ಹಾಗಿದ್ದಲ್ಲಿ ಈ ಜಿಲ್ಲೆಯಲ್ಲಿ ಹಾಳಾಗಿರುವ ರಸ್ತೆಗಳ ಅಭಿವೃದ್ಧಿಗಾಗಿ ಮೇಲ್ಕಂಡ ಸಂಸ್ಥೆಯಿಂದ ಸರ್ಕಾರ ವಸೂಲು ಮಾಡಿದ ಹಣವೆಷ್ಟು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ರಸ್ತೆಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಎಂ.ಎಂ.ಟಿ.ಸಿ. ಯಿಂದ ಯಾವುದೇ ತರಹದ ಹಣವನ್ನು ಲೋಕೋಪಯೋಗಿ ಇಲಾಖೆಯು ವಸೂಲಿ ಮಾಡುವುದಿಲ್ಲ.

ಹುಲಿ ಸಂರಕ್ಷಣ ಯೋಜನೆಗೆ ಸರ್ಕಾರದ ಅನುಮತಿ

774 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಿ ಸಂರಕ್ಷಣಾ ಯೋಜನೆಯನ್ನು ರಾಜ್ಯದ ನಾಲ್ಕು ಪ್ರಮುಖ ಅಭಯಾರಣ್ಯಗಳಲ್ಲಿ ಕಾರ್ಯಗತಗೊಳಿಸಲು ಸರ್ಕಾರ ಡಾ : ಕೆ. ಉಲ್ಲಾಸ್ ಕಾರಂತರಿಗೆ ಒಪ್ಪಿಗೆ ನೀಡಿದೆಯೇ?

ಆ) ಹಾಗಿದ್ದಲ್ಲಿ ಯಾವ ಷರತ್ತಿನ ಮೇಲೆ ಒಪ್ಪಿಗೆ ನೀಡಲಾಗಿದೆ.

ಇ) ಹಿಂದೆ ಹುಲಿಗಳಿಗೆ ರೇಡಿಯೋ ಕಾಲರ್‌ಗಳನ್ನು ಅಳವಡಿಸಿದ್ದು ಅದರಿಂದ ಹಲವಾರು ಹುಲಿಗಳು ಅಸು ನೀಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಹುಲಿಗಳ ಸಂರಕ್ಷಣೆಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ಹೌದು.

ಆ) 1. ಭಾರತ ಸರ್ಕಾರದಿಂದ ಅಗತ್ಯವಿರುವ ಎಲ್ಲಾ ಒಪ್ಪಿಗೆಯನ್ನು ಪಡೆದುಕೊಳ್ಳುವುದು ಹಾಗೂ ದಾನಿಗಳಿಂದ ಹಾಗೂ ಸ್ವಯಂ ಸೇವಾಸಂಸ್ಥೆಗಳಿಂದಲೂ ಸಹ ಅನುಮತಿಯನ್ನು ಪಡೆಯತಕ್ಕದ್ದು.

2. ಇದಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಪಾರದರ್ಶಿಕವಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಕರ್ನಾಟಕ ಸರ್ಕಾರದವರ ನೇರ ಮೇಲ್ವಿಚಾರಣೆಯಲ್ಲಿ ನಡೆಯತಕ್ಕದ್ದು.

3. ಸರ್ಕಾರವು ಈ ಯೋಜನೆಯ ಪ್ರಗತಿಯನ್ನು ಪರಿಶೀಲನೆ ಮಾಡಿ ಯಾವುದೇ ಸಮಯದಲ್ಲಿ ಕೊನೆಗಾಣಿಸಬಹುದಾಗಿದೆ.

4. ಮೇಲ್ಕಂಡ ಸಂಸ್ಥೆಯಿಂದ ಒದಗಿಸಬಹುದಾದ ಎಲ್ಲಾ ಸಂಪನ್ಮೂಲ ಸಾಧನ ಸಾಮಗ್ರಿಗಳ ಮೇಲೆ ಸರ್ಕಾರದ ಪೂರ್ಣ ಹತೋಟಿ ಇರುತ್ತದೆ.